**O.S.No.57/2015 DW.1**

ದಿಃ **05-06-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ.**MP** ವಕೀಲರವರಿಂದಃ</u>

**01.** ನನ್ನ ತಂದೆಯ ಹೆಸರು ರಾಮಪ್ಪ ಅವರು **1973** ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ ನಾನು, ಭಜ್ಜಪ್ಪ, ರೇವಣಸಿದ್ಧಪ್ಪ, ತುಮನೆಪ್ಪ ಮತ್ತು ದಾನಪ್ಪ ಎಂದು **5** ಜನ ಮಕ್ಕಳು. ದಾನಪ್ಪ ತೀರಿಕೊಂಡಿರುತ್ತಾನೆ, ಆತನ ಹೆಂಡತಿಯ ಹೆಸರು ಕಾಳಮ್ಮ. ನನ್ನ ತಂದೆಗೆ ನಾವು **5** ಜನ ಮಾತ್ರ ವಾರಸುದಾರರು ಬೇರೆ ಯಾರು ಇರುವುದಿಲ್ಲ. **Item No.1** ರಿಂದ **3** ದಾವಾ ಆಸ್ತೀಗಳು ಮಾತ್ರ ನಮ್ಮ ಪಿರ್ತಾರ್ಜಿತ ಆಸ್ತೀಗಳು ಆಗಿರುತ್ತವೆ ಎಂದರೆ ಸರಿ. ದಿ.**15-04-1981** ರಲ್ಲಿ **10** ಎಕರೆ ಪೈಕಿ **5** ಎಕರೆ ದಾನಪ್ಪನ ಹೆಸರಿನಲ್ಲಿ ಮತ್ತು **5** ಎಕರೆ ತುಮನೆಪ್ಪನ ಹೆಸರಿನಲ್ಲಿ ಖರೀದಿಸಲಾಗಿರುತ್ತದೆ ಎಂದರೆ ಸರಿ.

**02. Item No.6, 11-06-1984** ರಂದು ನನ್ನ ಹೆಸರಿನಲ್ಲಿ ಖರೀದಿ ಆಗಿರುತ್ತದೆ ಎಂದರೆ ಸರಿ. **Item No.04** ಕೂಡ ನನ್ನ ಹೆಸರಿನಲ್ಲಿ ಖರೀದಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಬೇರೆ ಆದ ನಂತರ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. **Item No.05**ನ್ನು ನಾನು ಖರೀದಿ ಮಾಡಿರುತ್ತೇನೆ. ಯಾವಾಗ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ನಮ್ಮ ತಂದೆಗೆ ನಾನು ಹಿರಿಯ ಮಗ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ನನ್ನ ಮನೆಯ ಯಜಮಾನಿಕೆಯನ್ನು ನಾನೇ ಮಾಡುತ್ತಿದ್ದೆ.

**03.** ನಮ್ಮ ಮನೆತನಕ್ಕೆ ದಾವಾ ಆಸ್ತೀಯಿಂದ ವ್ಯವಸಾಯದ ಉತ್ಪನ್ನ ಮತ್ತು ವರಮಾನ ಬಿಟ್ಟರೆ ಬೇರೆ ಯಾವುದು ಇಲ್ಲ ಎಂದು ಸಾಕ್ಷಿಯು ಸುಮ್ಮನೆ ಇರುತ್ತಾರೆ.

<u>ಈ ಸಮಯದಲ್ಲಿ ಸಾಕ್ಷಿಯು ಪಾಟೀ ಸವಾಲಿಗೆ ಸಹಕರಿಸದೇ ಇರುವ ಕಾರಣ ಪಾಟೀ ಸವಾಲನ್ನು ಮುಂದುಡಲಾಯಿತು.</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ.)

ದಿವಾಣಿ ನ್ಯಾಯಾಧೀಶರು,

ಹಡಗಲಿ.